# ಕೆ.ವಿ. ತಿರುಮಲೇಶ್ ಮಕ್ಕಳ ಪದ್ಯಗಳು

■ ಕಲೆ: ಮಂಜುನಾಥ ಹುಲಕೊಪ್ಪದ



### ನೀರ್ ನೀರ್ ನೀರುಳ್ಳಿ

ನೀರ್ ನೀರ್ ನೀರುಳ್ಳಿ
ಕಣ್ಣು ತುಂಬಾ ನೀರುಳ್ಳಿ

ಸಾಂಬಾರೆಲ್ಲಿ ನೀರುಳ್ಳಿ?
ಸಾಂಬಾರ‍್ರೈತೆ ಒಲೆ ಮೇಲೆ
ಊಟದ ವೇಳೆಗೆ ತಗೊಳ್ಳಿ

ನೀರ್ ನೀರ್ ನೀರುಳ್ಳಿ
ಕಣ್ಣು ತುಂಬಾ ನೀರುಳ್ಳಿ

ಭಜೀ ಎಲ್ಲಿ ನೀರುಳ್ಳಿ?
ಭಜೀ ಐತೆ ಕಡಾಯೀಲಿ
ತಿಂಡೀ ವೇಳೆಗೆ ತಗೊಳ್ಳಿ

ನೀರ್ ನೀರ್ ನೀರುಳ್ಳಿ
ಕಣ್ಣು ತುಂಬಾ ನೀರುಳ್ಳಿ

ಚುರು ಮುರು ಎಲ್ಲಿ ನೀರುಳ್ಳಿ?
ಚುರು ಮುರು ಐತೆ ತಟ್ಟೇಲಿ
ಟೀವಿ ನೋಡ್ತ ತಗೊಳ್ಳಿ

ಥ್ಯಾಂಕ್ಯೂ ಥ್ಯಾಂಕ್ಯೂ ನೀರುಳ್ಳಿ
ಬಾಯಿ ತುಂಬಾ ನೀರುಳ್ಳಿ

### ಬಟಾಣಿ ಪುಟಾಣಿ

ಬಟಾಣಿ ಬಟಾಣಿ ನಾನೂ ಕೂಡಾ
ಪೇಟೆಗೆ ಬರ್ತೀನಿ
ಪುಟಾಣಿ ನೀನೂ ಪೇಟೆಗೆ ಬಂದರೆ
ಬೀದಿಗೆ ಬೀಳುತ್ತೀ
ಬಸ್ಸೂ ಕಾರೂ ಭರ‍್ರನೆ ಬಂದು
ಚಟ್ಣಿ ಮಾಡ್ತಾವೆ

ಬಟಾಣಿ ಬಟಾಣಿ ನಾನೂ ಕೂಡಾ
ಜಾತ್ರಿಗೆ ಬರ್ತೀನಿ
ಪುಟಾಣಿ ನೀನೂ ಜಾತ್ರಿಗೆ ಬಂದರೆ
ತಪ್ಪಿಸಿಕೊಳ್ಳುತ್ತೀ
ತೂಗುತೊಟ್ಟಿಲಲಿ ಗಿರ‍್ರನೆ ತಿರುಗಿ
ತೊಟ್ಟಿಗೆ ಬೀಳುತ್ತೀ

ಬಟಾಣಿ ಬಟಾಣಿ ನಾನೂ ಕೂಡಾ
ಹೋಟ್ಲಿಗೆ ಬರ್ತೀನಿ
ಪುಟಾಣಿ ನೀನೂ ಹೋಟ್ಲಿಗೆ ಬಂದರೆ
ಕಿಚನಿಗೆ ನುಗ್ಗುತ್ತೀ
ವಗ್ಗರಣೆ ಸೌಟಿಗೆ ದೊಪ್ಪನೆ ಬಿದ್ದು
ಉಪ್ಪಿಟ್ಟಾಗುತ್ತೀ

ಬಟಾಣಿ ಬಟಾಣಿ ನಾನೂ ಕೂಡಾ
ಶಾಲೆಗೆ ಬರ್ತೀನಿ
ಪುಟಾಣಿ ನೀನೂ ಶಾಲೆಗೆ ಬಂದರೆ
ಪುಸ್ತಕ ಯಾರು ಹೊರ್ತಾರೆ?
ಇರುವೆಗಳ್ ನಿನ್ನ ಕಂಡರೆ ಎಲ್ಲಾ
ಚಪ್ಪರಿಸಿ ತಿಂತಾವೆ

ಬಟಾಣಿ ಬಟಾಣಿ ನಾನೂ ಕೂಡಾ
ಪೂಜೆಗೆ ಬರ್ತೀನಿ
ಪುಟಾಣಿ ನೀನೂ ಪೂಜೆಗೆ ಬಂದರೆ
ಶರೀಫ ಸಾಬರು ಹಾಡ್ತಾರೆ
ನೀನೇ ದೇವರ ಅಂತಾರೆ

ನಿನ್ನನ್ನಲ್ಲೇ ಕೂರಿಸಿಬಿಟ್ಟು
ದೇವರು ಹೋಗ್ತಾನಲ್ಲಿಂದ ಹೊರಟು

